Sri S. S. KULKE BAIL.—Has it come to the notice of Government that most of the industrialists who have approached this Government for aid and help have gone away with frustration ?

Sri K. MALLAPPA.—Nobody is frustrated, Sir.

Sri BAPU RAO HULSURKAR.—What happened to the proposal of Bidar ?

Sri K. MALLAPPA.—It is pending with the Central Government; that is all I can say. They have considered and they have found that Bidar is suitable. But there is the financial difficulty. Co-operative Societies will have to be financed by the Industrial Finance Cor oration and at present the Corporation has got some difficulty about finances. However, Government of India is examining how far finances could be made available.

Fishermen Population in the State.

*Q.—650. Smt. V. V. MIRJANKAR (Kumta).—

Will the Government be pleased to state :—

(*a*) what is the fishermen population in the State;

(*b*) whether the Government have conducted any survey regarding the socio-economic conditions of this community ?

A.—Sri B. RACHAIAH (Minister for Forests and Fisheries).—

(*a*) 6,88,000 (approximately).

(*b*) No.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಈ ಸಂಬಂಧವಾದ ಒಂದು ವರದಿ ಸರಕಾರದಲ್ಲಿಲ್ಲದಿರುವುದರಿಂದ ಸರಕಾರ ಕೈಕೊಂಡ ಅಭ್ಯುದಯ ಕೆಲಸಗಳ ಪ್ರಯೋಜನ ಸರಿಯಾದ ಜನರಿಗೆ ದೊರೆಯದೆ ಕೆಲವೇ ಕಡೆ ಕಾನ್‌ಸೆಂಟ್ರೇಟ್ ಆಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಹಾಗೇನೂ ಆಗಿಲ್ಲ, ಸ್ವಾಮಿ.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಹಿಂದೆ ಉತ್ತರ ಕೊಡುತ್ತಾ ಉತ್ತರ ಕನ್ನಡ ಜಿಲ್ಲೆಗೆ 7 ಎಂಜಿನ್ನುಗಳನ್ನೂ ದಕ್ಷಿಣ ಕನ್ನಡ ಜಿಲ್ಲೆಗೆ 50 ಎಂಜಿನ್ನುಗಳನ್ನೂ ಕೊಟ್ಟಿರುವುದಾಗಿ ಹೇಳಿದರು. ಸರಿಯಾದ ವರದಿ ತಮ್ಮಲ್ಲಿ ಇಲ್ಲದಿರುವುದರಿಂದ ಈ ರೀತಿ ಕೊಡಲು ಕಾರಣವಾಗಿದೆಯಲ್ಲವೇ ?

ಶ್ರೀ ಬಿ. ರಾಚಯ್ಯ.—ಉತ್ತರ ಕನಡ ಜಿಲ್ಲೆಯಿಂದ 97 ಅರ್ಜಿಗಳು ಬಂದಿದ್ದುವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 450 ಅರ್ಜಿಗಳು ಬಂದಿದ್ದು ಅದರ ಪ್ರಮಾಣಕ್ಕನುಸಾರವಾಗಿ ಕೊಡಲಾಗಿದೆ.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಉತ್ತರ ಕನ್ನಡ ಜಿಲ್ಲೆಗೆ ಹೆಚ್ಚು ಕೊಡಲು ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಪ್ರತಿ 10 ಮೈಲಿಗಳಿಗೆ ಒಂದು ಶೀತಲಗೃಹ ತೆರೆಯಬೇಕೆಂದಿತ್ತು. ಅದರ ಪ್ರಕಾರ ಮಾಡಲಾಗಿದೆ. ಹೆಚ್ಚಿಗೆ ಉತ್ತರ ಕನ್ನಡ ಜಿಲ್ಲೆಗೆ ಬೇಕಾದರೆ ಕೊಡಲು ಪ್ರಯತ್ನಮಾಡುತ್ತೇವೆ.

ಶ್ರೀ ಬಿ. ಭಾನ್ಕರಶೆಟ್ಟಿ.—ಎಂಜಿನುಗಾರಿಕೆಗೆ ಬೇಕಾದ ಯಾಂತ್ರಿಕ ದೋಣಿ ಮುಂತಾದ ಸಾಕಾರ್ಯ ಹೆಚ್ಚಾಗಿ ವ್ಯಾಪಾರಸ್ಥರಿಗೆ ದೊರೆತಿದೆಯೇ ಹೊರತು ಎಂಜಿನು ಹಿಡಿಯುವವರಿಗೆ ದೊರೆತಿಲ್ಲ ವೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಅದು ಸತ್ಯಕ್ಕೆ ದೂರವಾದ ಮಾತು. ತೆರಹೇತು ಹೆಡದ 4 ಜನರಿಗೆ ಒಂದೊಂದು ದೋಣಿ ಕೊಟ್ಟಿದೆ. ವ್ಯಾಪಾರಸ್ಥರಿಗೆ ಹೆಚ್ಚಾಗಿ ಕೊಟ್ಟಿರುವುದಿಲ್ಲ.

Mr. SPEAKER.—If the Member has got particulars he may give names on a slip of paper and I will pass it on.

Sri B. BHASKAR SHETTY.—Yes, Sir.

Sri R. S. HEGDE.—Has it come to the notice of Government that the conditions of fishermen are worse than Harijans ?

ಶ್ರೀ ಬಿ. ರಾಚಯ್ಯ.—ಅವರು ಸಾಮಾಜಿಕವಾಗಿ ಮುಂದುವರದವರೆಂದು ಪರಿಗಣಿಸಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ತರಬೇತು ಪಡೆದವರಿಗೆ 50ಕ್ಕಿಂತ ಮೇಲ್ಪಟ್ಟು ಎಂಜಿನ್ನುಗಳನ್ನು ಕೊಟ್ಟಿದ್ದೀರಾ ?

ಶ್ರೀ ಬಿ. ರಾಚಯ್ಯ.—ಇದುವರೆಗೆ ತರಬೇತು ಪಡೆದವರಿಗೆ ಮಾತ್ರ ಕೊಡಲಾಗಿದೆ. ಕಳೆದ ವರ್ಷ ತರಬೇತು ಪಡೆದವರು ಕಡಮೆಇದ್ದರು. ಮುಂದೆ ಬಂದವರಿಗೆ ಎಂಜಿನ್ನು ಕೊಟ್ಟು ಹಲ್ಲು ಕಟ್ಟಲು ಏರ್ಪಾಡುಮಾಡಿದ್ದೇವೆ. ಈ ವರ್ಷ ಅವರು ಟ್ರೈನಿಂಗ್ ತೆಗೆದುಕೊಳ್ಳುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಮಾರು 7 ಲಕ್ಷವಿರುವ ಈ ಜನರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿರುವ ಅಡ್ಡಿಆತಂಕಗಳನ್ನು ತೊಡೆದುಹಾಕಲು ಒಂದು ಸರ್ವೆಮಾಡಲು ಸರಕಾರ ಪ್ರಯತ್ನಮಾಡುವುದೇ ?

ಶ್ರೀ ಬಿ. ರಾಚಯ್ಯ.—ಮಾಡುವುದು.

ಶ್ರೀ ಗೋಪಾಲ ಸಾರೆನ್ನ.—ಮೆಕೆನೈಜ್ಡ್ ಬೋಟ್ ಟ್ರೈನಿಂಗ್, ಡೀಪ್ ಸೀ ಫಿಷಿಂಗ್ ಮುಂತಾದ್ದೇನು ಯೋಜನೆಯಲ್ಲಿ ಅಡಕವಾಗಿದೆ ಅದಕ್ಕಾಗಿ ಸರ್ವೆಮಾಡದೆ ಯಾವ ಆಧಾರದಮೇಲೆ 50 ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಡಲಾಗಿದೆ ?

ಶ್ರೀ ಬಿ. ರಾಚಯ್ಯ.—ಯಾರಿಗೂ ಇರಾಖೆಯಿಂದ 50 ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟಿಲ್ಲ. ವಿಷಯ ತಿಳಿಯದೆ ಇಂಥ ಪ್ರಶ್ನೆ ಹಾಕುತ್ತಿದ್ದಾರೆ.

ಅಧ್ಯಕ್ಷರು.—ಸಾಲವೋ ಅಥವಾ ಗ್ರಾಂಟೋ ?

ಶ್ರೀ ಗೋಪಾಲ ಸಾರೆನ್ನ.—ಸಾಲ ಮತ್ತು ಗ್ರಾಂಟು.

ಶ್ರೀ ಅಂದಾನಯ್ಯ.—ಬೆಸ್ತರನ್ನು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿಸಬೇಕೆಂಬ ಪ್ರಪೋಸಲ್ ಇತ್ತು. ಅದನ್ನು ಕಾರ್ಯರೂಪಕ್ಕೆ ತರಲಾಗಿದೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಸುಮಾರು 7 ಲಕ್ಷ ಬೆಸ್ತರ ಪೈಕಿ ಸಂಚಾರಿ ಜನರು ಎಷ್ಟಿದ್ದಾರೆ ? ಅವರಿಗೆ ವಿಶೇಷ ಸೌಲಭ್ಯವನ್ನು ಕೊಡಲು ಏನು ಏರ್ಪಾಡು ಮಾಡಲಾಗಿದೆ ?

ಶ್ರೀ ಬಿ. ರಾಚಯ್ಯ.—ಸಂಚಾರಿ ಜನ ಕೋಷಿಯರ್ ವೆಲ್‌ಫೇರ್ ಇಲಾಖೆಯಿಂದ ನೊಮ್ಯಾಡಿಕ್ ಟ್ರೈಬ್ಸ್‌ಗೆ ಕೊಟ್ಟಿರುವ ಸೌಲಭ್ಯವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ರಿಪೈಡ್ಡ್ ಪ್ರೋಗ್ರಾಂ ಪ್ರಕಾರ ಕೋಲ್ಡ್ ಸ್ಟೋರೇಜ್ ಹಾಕುವುದಿದೆ. ಅದನ್ನು ಎಲ್ಲಿ ಹಾಕುತ್ತೀರಿ ?

ಶ್ರೀ ಬಿ. ರಾಚಯ್ಯ.—ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಆ ತಪಶೀಲನ್ನು ಕೊಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಸುಮಾರು 7 ಲಕ್ಷವಿರುವ ಈ ಕೈಗಾರಿಕೆಯನ್ನವಲಂಬಿಸಿರುವವರ ಆರ್ಥಿಕ ಸ್ಥಿತಿಯನ್ನು ಸರ್ವೆಮಾಡಿ ಅವರನ್ನು ಉತ್ತಮಸ್ಥಿತಿಗೆ ತರಲು ಸರಕಾರ ನೂಕ್ಕ ಕ್ರಮ ಕೈಕೊಳ್ಳುವುದು ಅದರ ಕರ್ತವ್ಯವಲ್ಲವೇ ?

ಶ್ರೀ ಬಿ. ರಾಚಯ್ಯ.—ಅದಕ್ಕಾಗಲೆ ಉತ್ತರ ಹೇಳಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೆಸ್ತರ ಪೈಕಿ ಸಂಚಾರಿ ಮತ್ತು ಅರೆಸಂಚಾರಿ ವರ್ಗಕ್ಕೆ ಸೇರಿದವರಿಗೆ ಮೀನು ಹಿಡಿಯುವುದರಲ್ಲಿ ಶಿಕ್ಷಣ ಕೊಡುವುದರಲ್ಲಾಗಲೀ, ಇತರ ಸೌಲಭ್ಯಗಳನ್ನು ಕೊಡುವುದರಲ್ಲಾಗಲೀ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಮೀನ ಹಿಡಿಯತಕ್ಕ ಶಿಕ್ಷಣ ಪಡೆಯುವುದಕ್ಕೆ ಯಾರಾದರೂ ಬರಬಹುದು. ಅವರು ಬಂದರೆ ಅವರಿಗೆ ಅದ್ಯತೆಯನ್ನು ಕೊಡುತ್ತೇವೆ.

ಶ್ರೀ ಎಂ. ಶ್ರೀನಿವಾಸ ನಾಯಕ್.—6,88,000 ಬೆಸ್ತರ ಪೈಕಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಜನರಿದ್ದಾರೆ ಸ್ವಾಮಿ ?

ಶ್ರೀ ಬಿ. ರಾಚಯ್ಯ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 56,476 ಜನ ಇದ್ದಾರೆಂದು ಗೊತ್ತಾಗಿದೆ.